**All India Radio: Bangalore**
**National Bulletin In Kannada**
**02.08.2025  1.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**02.08.2025  1.10 p.m.**
**<><><><>**

ಮುಖ್ಯಾಂಶಗಳು

1. ವಾರಾಣಸಿಯಲ್ಲಿ ಪಿಎಂ-ಕಿಸಾನ್ ಸಮ್ಮಾನ್ ನಿಧಿಯ ೨೦ನೇ ಕಂತು ಬಿಡುಗಡೆಗೊಳಿಸಿದ ಪ್ರಧಾನಿ ನರೇಂದ್ರ ಮೋದಿ
2. ಭಾರತ - ವಿಶ್ವಸಂಸ್ಥೆ ಜಾಗತಿಕ ಸಾಮರ್ಥ್ಯವರ್ಧನೆ ಉಪಕ್ರಮದಡಿ  ಮೊದಲ ಹಂತದ ೪ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ
3. ಜುಲೈ ತಿಂಗಳಲ್ಲಿ ಯುಪಿಐ ಹೊಸ ದಾಖಲೆ; ೨೫.೧ ಲಕ್ಷ ಕೋಟಿ ಮೊತ್ತದ ಒಂದು ಸಾವಿರದ ೯೪೭ ಕೋಟಿ ವಹಿವಾಟು
4. ಆಂಡರ್‌ಸನ್ ತೆಂಡೂಲ್ಕರ್ ಟ್ರೋಫಿ ಟೆಸ್ಟ್ ಸರಣಿ; ಕೊನೆಯ ಪಂದ್ಯದ ಮೂರನೇ ದಿನದಾಟಲ್ಲಿಂದು ಎರಡನೇ ಇನ್ನಿಂಗ್ಸ್ ಮುಂದುವರಿಸಲಿರುವ ಭಾರತ

<><><><>

ಪ್ರಧಾನಿ ನರೇಂದ್ರ ಮೋದಿ ವಾರಾಣಸಿಯಲ್ಲಿಂದು ಪ್ರಧಾನಮಂತ್ರಿ ಕಿಸಾನ್ ಯೋಜನೆಯ ೨೦ನೇ ಕಂತಿನ ಹಣ ಬಿಡುಗಡೆ ಮಾಡಿದರು. ಇದೇ ವೇಳೆ ಅವರು, ೨ ಸಾವಿರದ ೨೦೦ ಕೋಟಿ ರೂಪಾಯಿಗೂ ಅಧಿಕ ಮೊತ್ತದ ೫೨ ಅಭಿವೃದ್ಧಿ ಯೋಜನೆಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಿದರು. ಬಳಿಕ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ ಅಡಿಯಲ್ಲಿ ದೇಶದ ಹತ್ತು ಕೋಟಿ ರೈತರ ಖಾತೆಗಳಿಗೆ ನೇರವಾಗಿ ೨೧ ಸಾವಿರ ಕೋಟಿ ರೂಪಾಯಿಯನ್ನು ಜಮಾ ಮಾಡಲಾಗಿದೆ. ಇದರ ಜತೆಗೆ ವಾರಾಣಸಿಯ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಸುಮಾರು ೨ ಸಾವಿರ ಕೋಟಿ ರೂಪಾಯಿಗೂ ಅಧಿಕ ಮೊತ್ತದ ಯೋಜನೆಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಲಾಗಿದೆ ಎಂದು ಹೇಳಿದರು. ಆಪರೇಷನ್ ಸಿಂದೂರ್ ಮೂಲಕ ದೇಶದ ಹೆಣ್ಣು ಮಕ್ಕಳಿಗೆ ನೀಡಿದ್ದ ಭರವಸೆಯನ್ನು ಈಡೇರಿಸಿರುವುದಾಗಿ ಅವರು ತಿಳಿಸಿದರು.

*****ಧ್ವನಿ*** ಪ್ರಧಾನಮಂತ್ರಿ**

ಪ್ರಧಾನಮಂತ್ರಿ ಕಿಸಾನ್ ಯೋಜನೆಯ ೨೦ನೇ ಕಂತಿನ ಬಿಡುಗಡೆಯ ಮೂಲಕ ಪ್ರಧಾನಿ, ೯ ಕೋಟಿ ೭೦ ಲಕ್ಷ ರೈತರ ಖಾತೆಗಳಿಗೆ ನೇರವಾಗಿ ಒಟ್ಟು ೨೦ ಸಾವಿರದ ೫೦೦ ಕೋಟಿ ರೂಪಾಯಿ ಜಮೆ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಿದರು. ಇದರಿಂದ ಪಿಎಂ ಕಿಸಾನ್ ಯೋಜನೆಯಡಿ ಒಟ್ಟು ಬಿಡುಗಡೆಗೊಳಿಸಿದ ಮೊತ್ತ ೩ ಲಕ್ಷ ೯೦ ಸಾವಿರ ರೂಪಾಯಿ ದಾಟಲಿದೆ. ವಾರಾಣಾಸಿಯ ರಸ್ತೆ ಸಂಪರ್ಕ ಸುಧಾರಣೆಯ ಕ್ರಮವಾಗಿ ಪ್ರಧಾನಿ, ವಿವಿಧ ರಸ್ತೆ ಕಾಮಗಾರಿಗಳಿಗೆ ಚಾಲನೆ ನೀಡಿದರು. ಇದರ ಜೊತೆಗೆ ಮೂಲಸೌಕರ್ಯ ಅಭಿವೃದ್ಧಿಯ ಭಾಗವಾಗಿ ಸ್ಮಾರ್ಟ್ ವಿತರಣಾ ಯೋಜನೆಯಡಿ ವಿವಿಧ ಕಾಮಗಾರಿಗಳಿಗೆ ಹಾಗೂ ೮೮೦ ಕೋಟಿ ರೂಪಾಯಿ ಮೊತ್ತದ ವಿದ್ಯುತ್ ಮೂಲಸೌಕರ್ಯ ಕುರಿತ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ಇದೇ ವೇಳೆ ಪ್ರಧಾನಿ, ಜಲಜೀವನ್ ಮಿಷನ್ ಅಡಿ ೪೨ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಿಗೆ ಚಾಲನೆ ನೀಡಿದರು ಹಾಗೂ ನಗರ ವ್ಯಾಪ್ತಿಯ ೫೩ ಶಾಲಾ ಕಟ್ಟಡಗಳ ಅಭಿವೃದ್ಧಿ ಕಾಮಗಾರಿಗೆ ಹಸಿರು ನಿಶಾನೆ ತೋರಿದರು.

<><><><>

ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಪೂರೈಸುವಲ್ಲಿ ಜಾಗತಿಕ ದಕ್ಷಿಣ ರಾಷ್ಟ್ರಗಳಿಗೆ ನೆರವಾಗುವ ಉದ್ದೇಶದಿಂದ ಭಾರತ - ವಿಶ್ವಸಂಸ್ಥೆ ಜಾಗತಿಕ ಸಾಮರ್ಥ್ಯವರ್ಧನೆ ಉಪಕ್ರಮ ಅಡಿಯಲ್ಲಿ ಮೊದಲ ಹಂತದಲ್ಲಿ ನಾಲ್ಕು ಅಭಿವೃದ್ಧಿ ಯೋಜನೆಗಳಿಗೆ ಭಾರತ ಅಧಿಕೃತವಾಗಿ ಚಾಲನೆ ನೀಡಿದೆ. ಈ ಯೋಜನೆಗಳನ್ನು ವಿದೇಶಾಂಗ ಸಚಿವಾಲಯದ ಪಶ್ಚಿಮ ವಿಭಾಗದ ಕಾರ್ಯದರ್ಶಿ ತನ್ಮಯ ಲಾಲ್ ಉದ್ಘಾಟಿಸಿದ್ದು, ಇದು ಭಾರತದ ಅಭಿವೃದ್ಧಿ ಪಾಲುದಾರಿಕೆ ಪ್ರಯತ್ನಗಳ ಸಹಜ ವಿಸ್ತರಣೆಯಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಮೊದಲ ಹಂತದಲ್ಲಿ ವಿಶ್ವ ಆಹಾರ ಕಾರ್ಯಕ್ರಮದ ಸಹಯೋಗದಲ್ಲಿ ನೇಪಾಳದಲ್ಲಿ ಅಕ್ಕಿ ಸಾರವರ್ಧನೆ ಮತ್ತು ಪೂರೈಕೆ ಸರಪಳಿ ನಿರ್ವಹಣೆ, ಯುಎನ್‌ಡಿಪಿ ಸಹಕಾರದಲ್ಲಿ ಝಾಂಬಿಯಾ ಮತ್ತು ಲಾವೋಪೀಡಿಯಾರ್‌ನಲ್ಲಿ ಡಿಜಿಟಲ್ ಆರೋಗ್ಯ ವೇದಿಕೆಗಳ ಅಭಿವೃದ್ಧಿ, ಬೆಲಿಸ್ ಬಾರ್ಬಡೋಸ್ ಸೇಂಟ್ ಕಿಟ್ಸ್ ಮತ್ತು ನೇವಿಸ್, ಸುರಿನಾಮೆ ಹಾಗು ಟ್ರಿನಿಡಾಡ್-ಟೊಬ್ಯಾಗೊದಲ್ಲಿ ಜನಗಣತಿ ತಯಾರಿ ಕುರಿತು ಅಧಿಕಾರಿಗಳ ತರಬೇತಿ, ದಕ್ಷಿಣ ಸುಡಾನ್‌ನಲ್ಲಿ ಯುನೆಸ್ಕೋ ಸಹಕಾರದಲ್ಲಿ

ವೃತ್ತಿಪರ ತರಬೇತಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. ಇವುಗಳಲ್ಲಿ ಕೆಲವು ಆಯ್ದ ತರಬೇತಿ ಕಾರ್ಯಕ್ರಮಗಳು ಸೆಪ್ಟೆಂಬರ್‌ನಲ್ಲಿ ಆರಂಭಿಸಲು ನಿಗದಿಪಡಿಸಲಾಗಿದ್ದು, ನಿಗದಿತ ಭಾರತೀಯ ತರಬೇತಿ ಸಂಸ್ಥೆಗಳ ಮೂಲಕ ಜಾರಿಗೆ ತರಲಾಗುತ್ತಿದೆ.

<><><><>

ಭಾರತದ ಡಿಜಿಟಲ್ ಪಾವತಿ ವ್ಯವಸ್ಥೆಯ ಆಧಾರಸ್ತಂಬವಾಗಿರುವ ಏಕೀಕೃತ ಪಾವತಿ ವ್ಯವಸ್ಥೆ - ಯುಪಿಐ ೨೦೨೫ರ ಜುಲೈನಲ್ಲಿ ಒಟ್ಟು ೨೫.೧ ಲಕ್ಷ ಕೋಟಿ ರೂಪಾಯಿ ಮೊತ್ತದ ಒಂದು ಸಾವಿರದ ೯೪೭ ಕೋಟಿ ವಹಿವಾಟುಗಳನ್ನು ನಡೆಸಿ, ಹೊಸ ದಾಖಲೆ ಸೃಷ್ಟಿಸಿದೆ. ವರ್ಷದಿಂದ ವಷಕ್ಕೆ ವಹಿವಾಟು ಪ್ರಮಾಣ ಶೇಕಡ ೩೫ರಷ್ಟು ಏರಿಕೆ ಕಂಡಿದ್ದು, ಮೌಲ್ಯದಲ್ಲೂ ಶೇಕಡ ೨೨ರಷ್ಟು ಏರಿಕೆ ದಾಖಲಾಗುವ ಮೂಲಕ ಡಿಜಿಟಲ್ ಪಾವತಿ ಪರಿಸರ ವ್ಯವಸ್ಥೆಯಲ್ಲಿ ಯುಪಿಐನ ಸದೃಢತೆಯನ್ನು ದೃಢಪಡಿಸಿದೆ. ದೈನಂದಿನ ಆಧಾರದಲ್ಲಿ ಸರಾಸರಿ ಯುಪಿಐ ವಹಿವಾಟುಗಳ ಸಂಖ್ಯೆ ಜೂನ್‌ನಲ್ಲಿ ೬೧.೩ ಕೋಟಿಯಿಂದ ಜುಲೈನಲ್ಲಿ ೬೨.೮ ಕೋಟಿಗೆ ಏರಿದೆ. ದೈನಂದಿನ ವ್ಯವಹಾರದ ಮೌಲ್ಯವು ಜೂನ್‌ನಲ್ಲಿ ೮೦ ಸಾವಿರದ ೧೩೧ ಕೋಟಿಯಿಂದ ಜುಲೈನಲ್ಲಿ ೮೦ ಸಾವಿರದ ೯೧೯ ಕೋಟಿ ರೂಪಾಯಿಗೆ ಏರಿಕೆ ಕಂಡಿದೆ. ಡಿಜಿಟಲ್ ಪಾವತಿಯಲ್ಲಿ ಬಳಕೆದಾರರ ಹೆಚ್ಚುತ್ತಿರುವ ವಿಶ್ವಾಸ ಮತ್ತು ಹಂತ-೨ ಹಾಗೂ ಹಂತ-೩ ನಗರಗಳಲ್ಲಿ ಯುಪಿಐ ಸೇವೆಗಳ ಪರಿಣಾಮಕಾರಿ ಪ್ರವೇಶ ಈ ಬೆಳವಣಿಗೆಗೆ ಕಾರಣವಾಗಿದೆ.

<><><><>

ರಾಷ್ಟ್ರಪತಿ ಭವನದಲ್ಲಿರುವ ಅಮೃತ್ ಉದ್ಯಾನವನವನ್ನು ಇದೇ ೧೬ರಿಂದ ಮುಂದಿನ ತಿಂಗಳ ೧೪ರ ವರೆಗೆ ಸಾರ್ವಜನಿಕರಿಗೆ ತೆರೆಯಲಾಗುತ್ತಿದೆ. ಈ ಕುರಿತು ಮಾಹಿತಿ ನೀಡಿರುವ ರಾಷ್ಟ್ರಪತಿಗಳ ಕಚೇರಿ, ಉದ್ಯಾನವನ ಸೋಮವಾರ ಹೊರತುಪಡಿಸಿ, ಪ್ರತಿದಿನ ಬೆಳಗ್ಗೆ ೧೦ ಗಂಟೆಯಿಂದ ಸಂಜೆ ೬ ಗಂಟೆವರೆಗೆ ತೆರೆದಿರಲಿದ್ದು, ಸಾರ್ವಜನಿಕರ ಮುಕ್ತ ಪ್ರವೇಶಕ್ಕೆ ಸಂಜೆ ೫.೧೫ಕ್ಕೆ ಅವಕಾಶ ಕಲ್ಪಿಸಲಾಗಿದೆ. ಎಲ್ಲರಿಗೂ ಉಚಿತ ಪ್ರವೇಶ ಇರಲಿದ್ದು, ಜಾಲತಾಣ visit.rashtrapatibhavan.gov.in ಗೆ ಭೇಟಿ ನೀಡಿ ಅಥವಾ ಗೇಟ್ ಸಂಖ್ಯೆ ೩೫ರಲ್ಲಿ ನೇರವಾಗಿ ತಮ್ಮ ಭೇಟಿಯನ್ನು ಕಾಯ್ದಿರಿಸಬಹುದಾಗಿದೆ.

<><><><>

ಭಾರತ ಮತ್ತು ಚೀನಾದ ಸೇನೆಗಳ ಗಡಿ ಸಂಘರ್ಷದ ಎಂಟು ವರ್ಷಗಳ ನಂತರ, ಡೋಕ್ಲಾಂ ಪ್ರದೇಶವನ್ನು ಪ್ರವಾಸಿಗರಿಗೆ ತೆರೆಯಲು ತೀರ್ಮಾನಿಸಲಾಗಿದೆ. ಈ ತೀರ್ಮಾನವನ್ನು ಭಾರತ ರಣಭೂಮಿ ದರ್ಶನ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗಿದೆ. ಡೋಕ್ಲಾಂ ಸಮುದ್ರಮಟ್ಟದಿಂದ ಸುಮಾರು ೧೪ ಸಾವಿರ ಅಡಿ ಎತ್ತರದಲ್ಲಿದ್ದು, ಸಿಕ್ಕಿಂನ ರಾಜಧಾನಿ ಗ್ಯಾಂಗ್‌ಟಾಕ್‌ನಿಂದ ಸುಮಾರು ೭೦ ಕಿಮೀ ದೂರದಲ್ಲಿದೆ. ಇದು ತೀವ್ರ ಭದ್ರತಾ ಸ್ಥಳವಾಗಿದ್ದ ಕಾರಣದಿಂದಾಗಿ ಈವರೆಗೆ ಸಾರ್ವಜನಿಕ ಪ್ರವೇಶ ನಿರ್ಬಂಧಿಸಲಾಗಿತ್ತು. ಈಗ ಪ್ರವಾಸೋದ್ಯಮವನ್ನು ಉತ್ತೇಜಿಸುವ ಜೊತೆಗೆ, ರಾಷ್ಟ್ರೀಯ ಗೌರವವನ್ನು ಹೆಚ್ಚಿಸಲು ಈ ಪ್ರದೇಶವನ್ನು ಪ್ರವಾಸಿಗರಿಗೆ ತೆರೆಯಲಾಗುತ್ತಿದೆ.

<><><>

ಭಾರತದ ರಕ್ಷಣಾ ಅಗತ್ಯಗಳ ಸರಬರಾಜು ಸಂಪೂರ್ಣವಾಗಿ ರಾಷ್ಟ್ರೀಯ ಭದ್ರತಾ ಅವಶ್ಯಕತೆಗಳು ಮತ್ತು ಕಾರ್ಯತಂತ್ರ ಮೌಲ್ಯಮಾಪನದ ಮೂಲಕ ನಿರ್ಧರಿಸಲಾಗುತ್ತದೆ ಎಂದು ವಿದೇಶಾಂಗ ಸಚಿವಾಲಯ ಸ್ಪಷ್ಟಪಡಿಸಿದೆ.

<><><>

ಲಂಡನ್‌ನ ಓವಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಆಂಡರ್‌ಸನ್ ತೆಂಡೂಲ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಯ ೫ನೇ ಹಾಗೂ ಕೊನೆಯ ಪಂದ್ಯದ ೩ನೇ ದಿನದಾಟದಲ್ಲಿಂದು ಭಾರತ ತನ್ನ ಎರಡನೇ ಇನ್ನಿಂಗ್ಸ್ ಅನ್ನು ಮುಂದುವರಿಸಲಿದೆ. ಎರಡನೇ ದಿನದಾಟದ ಅಂತ್ಯಕ್ಕೆ ನಿನ್ನೆ ಇಂಗ್ಲೆಂಡ್ ವಿರುದ್ಧ ತನ್ನ ಎರಡನೇ ಇನ್ನಿಂಗ್ಸ್ ಆರಂಭಿಸಿದ ಭಾರತ ೨ ವಿಕೆಟ್ ನಷ್ಟಕ್ಕೆ ೭೫ ರನ್ ಗಳಿಸಸಿದೆ. ಪ್ರಸ್ತುತ ಭಾರತ ೫೨ ರನ್‌ಗಳ ಮುನ್ನಡೆಯಲಿದ್ದು, ಅರ್ಧಶತಕ ಸಾಧಕ ಯಶಸ್ವಿ ಜೈಸ್ವಾಲ್ ಹಾಗೂ ಆಕಾಶ್‌ದೀಪ್ ಕಣದಲಿದ್ದಾರೆ. ಇಂದಿನ ದಿನದಾಟ ಅಪರಾಹ್ನ ೩.೩೦ಕ್ಕೆ ಆರಂಭವಾಗಲಿದೆ.

<><><>

ಮಕಾವ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ವಿಭಾಗದ ಸೆಮಿಫೈನಲ್‌ನ ಪ್ರತ್ಯೇಕ ಪಂದ್ಯಗಳಲ್ಲಿಂದು ಕಣಕ್ಕಿಳಿದಿದ್ದ ಭಾರತದ ಲಕ್ಷ್ಯಸೇನ್ ಹಾಗೂ ತರುಣ್ ಮನ್ನೇಪಲ್ಲಿ ಪರಾಭವಗೊಂಡು ಟೂರ್ನಿಯಿಂದ ಹೊರಬಿದ್ದಿದ್ದಾರೆ. ಲಕ್ಷ್ಯಸೇನ್ ಇಂಡೋನೇಷ್ಯಾದ ಅಲ್ವಿ ಫರಾನ್ ವಿರುದ್ಧದ ಪಂದ್ಯದಲ್ಲಿ ೧೬-೨೧, ೯-೨೧ ಅಂಕಗಳ ಅಂತರದಲ್ಲಿ ಸೋಲನುಭವಿಸಿದರೆ, ತರುಣ್ ಮಲೇಷ್ಯಾದ ಜಸ್ಟಿನ್ ಹೋ ವಿರುದ್ಧ ಮೊದಲ ಸೆಟ್‌ನ ಗೆಲುವಿನ ಹೊರತಾಗಿಯೂ

ಇನ್ನೆರಡು ಸೆಟ್‌ಗಳಲ್ಲಿ ಸೋತು, ಫೈನಲ್ ಪ್ರವೇಶಿಸಲು ವಿಫಲರಾದರು. ಪುರುಷರ ಡಬಲ್ಸ್‌ನಲ್ಲಿಂದು ಭಾರತದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್‌ಶೆಟ್ಟಿ ಜೋಡಿ ಮಲೇಷಿಯಾ ಜೋಡಿ ವಿರುದ್ಧ ಸೋಲನುಭವಿಸಿದೆ.

<><><><>

ಗ್ರೀಸ್‌ನ ಅಥೆನ್ಸ್‌ನಲ್ಲಿ ನಡೆದ ೧೭ ವರ್ಷದೊಳಗಿನವರ ವಿಶ್ವ ಕುಸ್ತಿ ಪಂದ್ಯಾವಳಿಯಲ್ಲಿ ಭಾರತೀಯ ಮಹಿಳಾ ಕುಸ್ತಿಪಟುಗಳು ಪ್ರಬಲ ಪ್ರದರ್ಶನ ನೀಡಿದ್ದು, ೨ ಚಿನ್ನ, ೩ ಬೆಳ್ಳಿ ಹಾಗೂ ಒಂದು ಕಂಚಿನ ಪದಕಗಳೊಂದಿಗೆ ಒಟ್ಟು ೬ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಆ ಮೂಲಕ ಭಾರತೀಯ ಮಹಿಳಾ ಕುಸ್ತಿ ತಂಡ ೧೫೧ ಅಂಕಗಳೊಂದಿಗೆ ಪ್ರಥಮ ಸ್ಥಾನ ಅಲಂಕರಿಸಿ, ಪ್ರಶಸ್ತಿ ತನ್ನದಾಗಿಸಿಕೊಂಡಿದ್ದು, ೧೪೨ ಅಂಕಗಳೊಂದಿಗೆ ಅಮೆರಿಕ ದ್ವಿತೀಯ ಸ್ಥಾನದಲ್ಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>